**ಇಂದು ದಿನಾಂಕ 04.06.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ನಂ. 9 ರ ಪರವಾಗಿ**

2. ವಾದಿಯ ಮಾಗಣಿಯನ್ನು ನಾನು ತಿಳಿದುಕೊಂಡಿರುತ್ತೇನೆ. ಅದರಂತೆ ವಾದಿಯ ಅಕ್ಕನಾದ ಪ್ರತಿವಾದಿ ನಂ. 9 ಇರವ ಮಾಗಣಿಯನ್ನು ಸಹ ನಾನು ತಿಳಿದುಕೊಂಡಿರುತ್ತೇನೆ. 2007 ನೇ ಇಸವಿಯಲ್ಲಿ ನಾನು ಖರೀದಿ ಮಾಡುವ ಮುಂಚೆ ನಾನು ವಕೀಲರ ಕಾನೂನು ಸಲಹೆಯನ್ನು ಪಡೆದಿರುತ್ತೇನೆ. ನಮ್ಮ ಮಾರಾಟಗಾರರಾದ 13 ನೇ ಪ್ರತಿವಾದಿ ಪಾರ್ವತಮ್ಮ ಇವರು ಜಮೀನನ್ನು 10 ನೇ ಪ್ರತಿವಾದಿಯಾದ ಮುನಿವೆಂಕಟಪ್ಪ ಇವರಿಂದ ಖರೀದಿ ಮಾಡಿದ್ದಾರೆ ಎಂದು ನನಗೆ ಗೊತ್ತು. ನಮ್ಮ ಕ್ರಯ ಪತ್ರಕ್ಕೆ ಮುನಿವೆಂಕಟಪ್ಪ ಇವರ ಸಹೋದರ ಸಹೋದರಿಯರ ಸಹಿ ಪಡೆದಿಲ್ಲ ಎಂದರೆ ನಿಜ.

3. ನಾನು ಖರೀದಿ ಮಾಡುವ ಕಾಲಕ್ಕೆ ಅಂದರೆ ದಿನಾಂಕ 24-02-2007 ರಂದು ಪ್ರಸ್ತುತ ದಾವೆ ಚಾಲ್ತಿಯಲ್ಲಿ ಇತ್ತು ಎಂದರೆ ಸರಿಯಲ್ಲ. ನನ್ನ ಕ್ರಯ ಪತ್ರದ ಆಸ್ತಿ ಸದರಿ ದಾವೆಯ ದಾವಾ ಅನುಸೂಚಿಯ ಕ್ರಮ ಸಂಖ್ಯೆ 2 ರ ಸ್ವತ್ತು ಎಂದರೆ ನಿಜ.

4. ಸಾಕ್ಷಿದಾರರಿಗೆ ನಿ.ಪಿ. 12, 13 ರಂತೆ ಇರುವ ಪಹಣಿ ಪತ್ರಿಕೆಗಳನ್ನು ತೋರಿಸಲಾಗಿ ಅದರಲ್ಲಿ RS No. 59/3 ವಾದಿಯರ ತಂದೆಯಾದ ನಲ್ಲಪ್ಪ ಇವರ ಹೆಸರಿನಲ್ಲಿದೆ ಎಂದರೆ ನಿಜ ಆದರೆ 1970 ರಲ್ಲಿ ಅವರ ಮನೆತನದಲ್ಲಿ ವಿಭಾಗವಾಗಿದೆ ಎಂದು ಉತ್ತರಿಸುತ್ತಾರೆ. ಈ ರೀತಿ ಇದೆ ಎಂದು ಹೇಳಲಾದ ವಿಭಾಗ ಪತ್ರದ ನಕಲು ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಈ ರೀತಿ ಹೇಳಿಕೆಯನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ನಾನು ಖರೀದಿ ಸಮಯಕ್ಕೆ ಪಹಣಿ ಪತ್ರಿಕೆಯನ್ನು ಮತ್ತು ನೊಂದು ಆಗಿರುವ ಎಲ್ಲಾ ದಾಖಲೆಗಳನ್ನು ನೋಡಿರುತೇನೆ. ನಾನು ಈ ರೀತಿ ಪಡೆದುಕೊಂಡಿರುವ ಎಲ್ಲಾ ಪತ್ರಗಳನ್ನು ನ್ಯಾಯಾಲಯಕ್ಕೆ ಹಾಜರು ಪಡೆಸಿದ್ದೇನೆ ಎಂದರೆ ನಿಜ. ಇವುಗಳನ್ನು ಹೊರತು ಪಡೆಸಿ ನನ್ನ ಹತ್ತಿರ ಬೇರೆ ದಾಖಲಾತಿಗಳು ಇವೆ ಎಂದರೆ ನಿಜ.

6. ವಿಭಾಗ ಪತ್ರ ಎಂದು ಹೇಳಲಾದ ಪತ್ರವನ್ನು ನಾನು ನೋಡಿಲ್ಲ, ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಇವತ್ತಿನವರೆಗೂ ನಲ್ಲಪ್ಪನ ಮಕ್ಕಳ ನಡುವೆ ಯಾವುದೇ ರೀತಿ ವಿಭಾಗವಾಗಿಲ್ಲ ಎಂದು ಸೂಚಿಸುವ ನಿಮ್ಮ ಸಲಹೆ ಸರಿಯಲ್ಲ.

7. ನಿ.ಪಿ. 14 ರಿಂದ 22 ರವರೆಗೆ ಇರುವ ಖರೀದಿ ಆಸ್ತಿಯ ಪಹಣಿ ಪತ್ರಿಕೆಗಳನ್ನು ಸಾಕ್ಷಿದಾರರಿಗೆ ತೋರಿಸಲಾಗಿ, 1983 ರಿಂದ 2005-06 ರವರೆಗೆ ಸದರಿ ಖರೀದಿತ ಆಸ್ತಿ ಮುನಿವೆಂಕಟಪ್ಪ ಬಿನ್ ನಲ್ಲಪ್ಪ ಇವರ ಹೆಸರಿನಲ್ಲಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುರವೆದು 2007 ನೇ ಇಸವಿಯಿಂದ ನನ್ನ ಹೆಸರಿನಲ್ಲಿ ಮುಂದುವರೆದಿದ್ದು ಇರುತ್ತದೆ ಎಂದು ಸ್ವತಃ ಹೇಳುತ್ತಾರೆ. ನಿ.ಪಿ. 14 ರಿಂದ 22 ರವರೆಗೆ ಇರುವ ಪಹಣಿಗಳಲ್ಲಿ ಖಬ್ಜಾ ಮತ್ತು ಸ್ವಾಧೀನತೆಯ ರೀತಿ "ಪಾವತಿ ತಕ್ಕೆ ಮೂಲಕ ಕಂದಾಯ ಪಟ್ಟಿಯ ಅನುಭವ" ಎಂದು ಇರುತ್ತದೆ ಎಂದರೆ ನಿಜ.

8. ನಲ್ಲಪ್ಪನಿಗೆ ಮುನಿವೆಂಕಟಮ್ಮ ಮತ್ತು ಲಕ್ಷಮ್ಮ ಎಂಬ ಇಬ್ಬರು ಪತ್ನಿಯರು ಎಂದರೆ ನಿಜ. ಸದರಿ ಮುನಿವೆಂಕಟಮ್ಮನಿಗೆ ಪಿಲ್ಲಪ್ಪ ಎಂಬುವ ಒಬ್ಬನೆ ಮಗ ಎಂದರೆ ನಿಜ. ಸದರಿ ಪಿಲ್ಲಪ್ಪನಿಗೆ ಪ್ರತಿವಾದಿ ನಂ. 1 ರಿಂದ 3 ರಂತೆ ಇರುವ ಮಕ್ಕಳು ಇರುತ್ತಾರೆ ಎಂದರೆ ನಿಜ. ಎರಡನೇ ಪತ್ನಿಯಾದ ಲಕ್ಷಮ್ಮನಿಗೆ ನಾಲ್ಕು ಜನ ಗಂಡು ಮಕ್ಕಳು ಮತ್ತು ಓರ್ವ ಮಗಳು ಇರುತ್ತಾರೆ ಎಂದರೆ ನಿಜ. ಆದ್ದರಿಂದ ವಾದಿ ಮತ್ತು ಪ್ರತಿವಾದಿ ನಂ. 1 ರಿಂದ 11 ಇವರು ನಲ್ಲಪ್ಪನ ಮಕ್ಕಳು ಎಂದರೆ ನಿಜ.

9. ನಲ್ಲಪ್ಪನ ಜೀವಿತಾವಧಿಯಲ್ಲಿ ಸದರಿಯವರು ಅವರ ಮಕ್ಕಳ ಹೆಸರಿನಲ್ಲಿ ಯಾವುದೇ ಮೃತ್ಯು ಪತ್ರವನ್ನು ಬರೆದಿಲ್ಲ ಎಂದರೆ ನಿಜ. ಅದ್ದರಿಂದ ಸದರಿ ಮಕ್ಕಳಿಗೆ 1/6 ಸಮಾನ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ.

10. 9 ನೇ ಪ್ರತಿವಾದ ನನ್ನ ಕ್ರಯ ಪತ್ರಕ್ಕಾಗಲಿ ನಮ್ಮ ಮಾರಾಟಗಾರರ ಕ್ರಯ ಪತ್ರಕ್ಕಾಗಲಿ ತಮ್ಮ ರುಜುವನ್ನು ಹಾಕಿಲ್ಲ ಎಂದರೆ ನಿಜ. ಆದ್ದರಿಂದ ಸದರಿಯವರಿಗೆ 2 ಕ್ರಯ ಪತ್ರಗಳು ಬಂಧನಕಾರಿಯಾಗುವುದಿಲ್ಲ ಎಂದರೆ ಸರಿಯಲ್ಲ. ದಾವಾ ಚಾಲ್ತಿಯಲ್ಲಿರುವಾಗಲೇ 9 ನೇ ಪ್ರತಿವಾದಿಗೆ ತೊಂದರೆ ಕೊಡುವ ಸಲುವಾಗಿ ನಾವು ಕ್ರಯ ಪತ್ರವನ್ನು ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ.

11. ನಿ.ಡಿ. 10 ರಂತೆ ಇರುವ ಕ್ರಯ ಪತ್ರದಲ್ಲಿ ಖರೀದಿತ ಆಸ್ತಿ ಪಿರ್ತಾರ್ಜಿತ ಆಸ್ತಿ ಎಂದು ಉಲ್ಲೇಖ ಇದೆ ಎಂದರೆ ನಿಜ. ಆದ್ದರಿಂದ ಪ್ರತಿವಾದಿ ನಂ. 9 ಇವರಿಗೆ 1/6 ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ನಾನು ಕಾನೂನು ಸಲಹೆ ಪಡೆದೆ ದಾಖಲೆಗಳನ್ನು ಸಹ ಸರಿಯಾಗಿ ಪರೀಶಿಲಿಸದೆ ಸದರಿ ಸ್ವತ್ತನ್ನು ಕ್ರಯಕ್ಕೆ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆದ್ದರಿಂದ ಸದರಿ ಆಸ್ತಿ ನನ್ನ ಸ್ವಯಾರ್ಜಿತ ಆಸ್ತಿ ಆಗುವುದಿಲ್ಲ ಎಂದು ಸೂಚಿಸುವ ನಿಮ್ಮ ಸಲಹೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**